**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**. 227/2022

**PW**. 03

**CW**. 04

**ಸಾಕ್ಷಿಯ ಹೆಸರು – ಶಾಮಲಾ**

**ಗಂಡನ ಹೆಸರು – ಲೋಕೇಶ**

**ವಯಸ್ಸು – 32 ವರ್ಷಗಳು** ದಿನಾಂಕ 15.04.2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ – ಗೃಹಿಣಿ**

**ವಾಸಸ್ಥಳ – ಬೆಟ್ಟದಪುರ, ಪಿರಿಯಾಪಟ್ಟಣ ತಾಲೂಕು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ 2, ಪ್ರಾಸಾ 1 ಮತ್ತು 6 ನನಗೆ ಗೊತ್ತು. ಆರೋಪಿಯ ತಾಯಿ ನಮ್ಮ ಊರಿನವರು. ಚಾಸಾ 2 ನನ್ನ ತಂದೆಯ ಊರಿನವರು. ಆರೋಪಿ ನನ್ನ ಸಂಬಂಧಿ. ಆರೋಪಿಯೊಂದಿಗೆ ಚಾಸಾ 2 ರವರ ಮದುವೆ ನಿಶ್ಚಯವಾಗಿದ್ದು ನನಗೆ ಗೊತ್ತಿಲ್ಲ. ಅವರ ಇಬ್ಬರ ಮದುವೆ ಕಾರ್ಯಕ್ರಮಕ್ಕೆ ಆಹ್ವಾನ ಇರಲಿಲ್ಲ. ಈಗ್ಗೆ ಸುಮಾರು 4 ವರ್ಷಗಳ ಹಿಂದೆ ರಾತ್ರಿ ಸುಮಾರು 7.30 ರಿಂದ 8 ಗಂಟೆಯ ಸಮಯದಲ್ಲಿ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿರುವ ಕೃಷಿ ಇಲಾಖೆಯ ಕಟ್ಟಡದ ಬಳಿ ನಾಯಿ ಬೊಗಳುವ ಶಬ್ಧ ಕೇಳಿ ನಾನು ಆ ಸ್ಥಳಕ್ಕೆ ಹೋದೆ. ನಾನು ಸಲ್ಲಿಗೆ ಹೋಗಿ ನೋಡಲಾಗಿ ರಸ್ತೆಯಲ್ಲಿ ಚಾಸಾ 2 ರವರು ಗಾಯಗೊಂಡು ಸ್ಥಳದಲ್ಲೇ ಬಿದ್ದಿದ್ದ. ಬೇರೆ ಯಾವ ವಸ್ತುಗಳು ಬಿದ್ದಿದ್ದವು ಎಂಬುದನ್ನು ನಾನು ನೋಡಲಿಲ್ಲ. ಆತನಿಗೆ ಸೇರಿದ ಮೋಟರ್ ಸೈಕಲ್ ಅಲ್ಲಿ ಬಿದ್ದಿತ್ತು. ನಾನು ಕೂಗಿಕೊಂಡೇ ಕೆಲವು ಜನ ಸ್ಥಳಕ್ಕೆ ಬಂದರು, ಆದರೆ ಯಾರು ಯಾರು ಬಂದರು ಎಂದು ನಾನು ನೋಡಿಲ್ಲ. ಆ ಸಮಯದಲ್ಲಿ ನನ್ನ ಗಂಡ ಮನೆಯಲ್ಲಿ ಇರಲಿಲ್ಲ. ನಂತರ ಸ್ಥಳದಲ್ಲಿ ಸೇರಿದ್ದವರು ಆ್ಯಂಬುಲೆನ್ಸ್ ಗೆ ಕರೆ ಮಾಡಿ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ನಾನು ಆಸ್ಪತ್ರೆಗೆ ಹೋಗಿರಲಿಲ್ಲ. ನಾನು ಚಾಸಾ 2 ರವರಿಗೆ ಸೇರಿದ ಬೇರೆ ಯಾವುದೇ ವಸ್ತುಗಳನ್ನು ನಾನು

ನೋಡಲಿಲ್ಲ. ಚಾಸಾ **2** ರವರಿಗೆ ಯಾರು ಹಲ್ಲೆ ಮಾಡಿದ್ದಾರೆ ಎಂದು ನನಗೆ ತಿಳಿಯಲಿಲ್ಲ. ಆ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ- ಸರ್ಕಾರಿ ಅಭಿಯೋಜಕರಿಂದಃ-**

ಸ್ಥಳದಲ್ಲಿ ಬಿದ್ದಿದ್ದ ಚಾಸಾ 2 ರವರನ್ನು ನೋಡಿದಾಗ ಎಲ್ಲಿ ರಕ್ತಗಾಯವಾಗಿತ್ತು, ಯಾವ ಭಾಗದಲ್ಲಿ ರಕ್ತಗಾಯವಾಗಿತ್ತು ಎಂದು ನಾನು ನೋಡಲಿಲ್ಲ. ನಮ್ಮ ಮನೆಯ ಪಕ್ಕದಲ್ಲಿ ಚಾಸಾ 6 ಮತ್ತು 7 ರವರ ಮನೆ ಇದೆ ಎಂದರೆ ಸರಿ. ಚಾಸಾ 8, ಆರೋಪಿಯ ಸೋದರ ಮಾವನಾಗಿದ್ದು, ಆತನು ನಮ್ಮ ಊರಿನವನು ಎಂದರೆ ಸರಿ. ಚಾಸಾ 5 ನನ್ನ ಗಂಡ ಎಂದರೆ ಸರಿ. ನಾನು ಕೂಗಿಕೊಂಡ ನಂತರ ಚಾಸಾ 5 ರಿಂದ 8 ರವರು ಸ್ಥಳಕ್ಕೆ ಬಂದರು ಎಂದರೆ ಸರಿ. ಕೃಷಿ ಇಲಾಖೆ ಕಛೇರಿ ಕಟ್ಟಡದ ವಿದ್ಯುತ್ ಸಂಪರ್ಕ ಮತ್ತು ಬೀದಿ ದೀಪದ ಸಂಪರ್ಕ ಸ್ಥಳದಲ್ಲಿ ಇತ್ತು ಎಂದರೆ ಸರಿಯಲ್ಲ. ನಾನು ಸಹ ಆ ದಿನ ಚಾಸಾ 2 ರವರನ್ನು ಆಸ್ಪತ್ರೆಗೆ ದಾಖಲಿಸಲು ಹೋಗಿದ್ದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಚಾಸಾ 2 ರವರಿಗೆ ಸೇರಿದ ಜರ್ಕಿನ್ ಸಹ ಬಿದ್ದಿತ್ತು ಎಂದರೆ ಸರಿಯಲ್ಲ. ಮು.ಮಾ. 4 ಮತ್ತು 5 ಗಳನ್ನು ಹಾಗೂ ನಿ.ಪಿ. 4 ರಲ್ಲಿ ಕಂಡ ಮೋಟರ ಸೈಕಲ್ ಅನ್ನು ನಾನು ನಮ್ಮ ಮನೆಯಲ್ಲಿ ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ. ಅವುಗಳೇ ಈ ದಿನ ನ್ಯಾಯಾಲಯದ ಮುಂದಿರುವ ವಸ್ತುಗಳು ಎಂದರೆ ಮೂ. ಮಾ 4, 5 ಹಾಗೂ ನಿ.ಪಿ. 4 ಛಾಯಾಚಿತ್ರಗಳಾಗಿರುತ್ತವೆ ಎಂದರೆ ಸರಿಯಲ್ಲ. ಚಾಸಾ 2 ರವರಿಗೆ ಸ್ಥಳದಲ್ಲಿ ಪ್ರಜ್ಞೆ ಇರಲಿಲ್ಲ. ಚಾಸಾ 2 ರವರನ್ನು ಆರೋಪಿ ವಿವಾಹವಾಗಲು ಇಷ್ಟವಿಲ್ಲದ ಕಾರಣ ಆ ದಿನ ಚಾಸಾ 2 ರವರನ್ನು ಆ ಸ್ಥಳಕ್ಕೆ ಕರೆಯಿಸಿ ಆರೋಪಿ ಚಾಸಾ 2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಹೊಟ್ಟೆಯ ಮತ್ತು ಪಕ್ಕೆಯ ಭಾಗಕ್ಕೆ ಹಲ್ಲೆ ಮಾಡಿದ್ದಾಳೆಂದು ತಿಳಿದುಬಂತು ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಆರೋಪಿ ಸ್ಥಳದಿಂದ ಪರಾರಿಯಾಗಿದ್ದಾಳೆ ಎಂದು ಚಾಸಾ 2 ನನಗೆ ತಿಳಿಸಿರುತ್ತಾನೆ ಎಂದರೆ

ಸರಿಯಲ್ಲ. ಆ ಬಗ್ಗೆ ನನಗೆ ರ್ಗ ಓದಿ ಹೇಳಿದಂತೆ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ. 11 ಎಂದು ಗುರುತಿಸಲಾಯಿತು. ಆರೋಪಿಯು ನನ್ನ ಸಂಬಂಧಿಯಾದ ಕಾರಣ ಅವರ ವಿವಾಹ ನಿಶ್ಚಯ ಮತ್ತು ಚಾಸಾ 2 ರವರೊಂದಿಗೆ ವಿವಾಹ ನಿಗದಿಯಾಗಿದ್ದ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಎಸ್. ವಕೀಲರಿಂದಃ–**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.